# Kuvempu University Library

Jnana Sahyadri, Shankaraghatta

## News Paper Clipping Service from Digital Library

**Date: 25-02-2016**

| Sl. No. | Name of the Paper | No. of Clippings |
|---|---|---|
| 01 | Kannada Prabha | 01 |
| 02 | Samyuktha Karnataka | 01 |
| 03 | Vijaya Karnataka | 03 |
| 04 | Vijayavani | 01 |
| 05 | Indian Express | 01 |

# ಹೋರಾಟ ಪುಟ ಮತ್ತೆ ಜೋಡಿಸುವ ಕಾರ್ಯಕ್ಕೆ ಮುಂದಾಗಿ

## ಶಂಕರಘಟ್ಟದ ಕುವೆಂಪು ವಿವಿಯಲ್ಲಿ ಅಂಬೇಡ್ಕರ್ ಅಧ್ಯಯನ ಕಾರ್ಯಾಗಾರ ಉದ್ಘಾಟಿಸಿದ ಪ್ರೊ.ರಮೇಶ್ ಕಾಂಬ್ಳೆ ಸಲಹೆ

• **ಕನ್ನಡಪ್ರಭ ವಾರ್ತೆ** ಶಿವಮೊಗ್ಗ

ನಮ್ಮ ನೆಲದ ದಲಿತ ಮತ್ತು ಶೋಷಿತ ಹೋರಾಟಗಳ ದಾಖಲೀಕರಣಕ್ಕೆ ಮುಂದಾಗುವ ಮೂಲಕ ಸಮಾಜದ ನೈಜ ಜ್ಞಾನ ಕಟ್ಟುವಲ್ಲಿ ಅಂಬೇಡ್ಕರ್ ಅಧ್ಯಯನ ಕೇಂದ್ರಗಳು ಜವಾಬ್ದಾರಿ ಹೊರ ಬೇಕಿದೆ ಹಾಗೂ ಇತಿಹಾಸ ಪುಸ್ತಕದಲ್ಲಿ ಕಣ್ಮರೆಯಾಗಿರುವ ದಮನಿತ ಹೋರಾಟಗಳ ಪುಟಗಳನ್ನು ಮತ್ತೆ ಜೋಡಿಸುವ ಕಾರ್ಯಕ್ಕೆ ಮುಂದಾಗಬೇಕು ಎಂದು ಮುಂಬೈ ಅಂಬೇಡ್ಕರ್ ಮತ್ತು ಫುಲೆ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ. ರಮೇಶ್ ಕಾಂಬ್ಳೆ ಹೇಳಿದರು.

ಶಂಕರಘಟ್ಟದ ಕುವೆಂಪು ವಿವಿ ಪ್ರೊ.ಎಸ್.ಪಿ. ಹಿರೇಮಠ ಸಭಾಂಗಣದಲ್ಲಿ ಡಾ.ಅಂಬೇಡ್ಕರ್ ಮತ್ತು ಬೌದ್ಧ ಅಧ್ಯಯನ ಕೇಂದ್ರ ಏರ್ಪಡಿಸಿದ್ದ ಕರ್ನಾಟಕ ರಾಜ್ಯದ ಎಲ್ಲ ವಿವಿಗಳ ಅಂಬೇಡ್ಕರ್ ಅಧ್ಯಯನ ಕೇಂದ್ರದ ನಿರ್ದೇಶಕರ ಒಂದು ದಿನದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ ವಿವಿ ಕುಲಪತಿ ಪ್ರೊ. ಜೋಗನ್ ಶಂಕರ್, ಸಮಾಜದ ಸರಿಯಾದ ನೋಟ ಗ್ರಹಿಸಲು ಅಂಬೇಡ್ಕರ್ ಕುರಿತ ಬರವಣಿಗೆಗಳು ಸಹಕಾರಿಯಾಗುತ್ತವೆ. ಈ ನಿಟ್ಟಿನಲ್ಲಿ ನಮ್ಮ ನಡುವೆ ಈಗಾಗಲೇ ಹಲವು ಮಹತ್ವಪೂರ್ಣ ಕೆಲಸಗಳು ನಡೆಯುತ್ತಿವೆ, ಮುಂದಿನ ದಿನಗಳಲ್ಲಿ ಕುವೆಂಪು ವಿವಿ ಅಂಬೇಡ್ಕರ್ 125ನೇ ಜನ್ಮದಿನಾಚರಣೆ ಅಂಗವಾಗಿ ಸಾಮಾಜಿಕ ಮತ್ತು ಬೌದ್ಧಿಕ ಬೆಳವಣಿಗೆಗೆ ಪೂರಕವಾದ ಹಲವು ಸಮಾಜಮುಖಿ ಕಾರ್ಯಕ್ರಮ ಹಮ್ಮಿಕೊಳ್ಳುವ ಕುರಿತು ಕಾರ್ಯಪ್ರವೃತ್ತವಾಗಲಿದೆ ಎಂದು ಹೇಳಿದರು.

ವಿವಿ ಕುಲಸಚಿವ ಪ್ರೊ.ಜೆ. ಸೋಮಶೇಖರ್, ದಲಿತ ಸಂಘರ್ಷ ಸಮಿತಿ ಸಂಸ್ಥಾಪಕ ಎನ್. ವೆಂಕಟೇಶ್ ಉಪಸ್ಥಿತರಿದ್ದರು. ರಾಜ್ಯದ ವಿವಿಧ ವಿವಿಗಳ ನಿರ್ದೇಶಕರು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

ಕುವೆಂಪು ವಿವಿ ಪ್ರೊ.ಎಸ್.ಪಿ. ಹಿರೇಮಠ ಸಭಾಂಗಣದಲ್ಲಿ ಏರ್ಪಡಿಸಿದ್ದ ರಾಜ್ಯದ ಎಲ್ಲವಿಗಳ ಅಂಬೇಡ್ಕರ್ ಅಧ್ಯಯನ ಕೇಂದ್ರದ ನಿರ್ದೇಶಕರ ಒಂದು ದಿನದ ಕಾರ್ಯಗಾರ ಮುಂಬೈ ಅಂಬೇಡ್ಕರ್ ಮತ್ತು ಫುಲೆ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ. ರಮೇಶ್ ಕಾಂಬ್ಳೆ ಉದ್ಘಾಟಿಸಿದರು.




ಕುವೆಂಪು ವಿವಿಯ ಪ್ರೊ. ಎಸ್.ಪಿ. ಹಿರೇಮಠ ಸಭಾಂಗಣದಲ್ಲಿ ಡಾ.ಬಿ.ಆರ್ ಅಂಬೇಡ್ಕರ್ ಮತ್ತು ಬೌದ್ಧ ಅಧ್ಯಯನ ಕೇಂದ್ರ ಏರ್ಪಡಿಸಿದ್ದ ಕರ್ನಾಟಕ ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳ ಅಂಬೇಡ್ಕರ್ ಅಧ್ಯಯನ ಕೇಂದ್ರಗಳ ನಿರ್ದೇಶಕರುಗಳ ಒಂದು ದಿನದ ಕಾರ್ಯಾಗಾರವನ್ನು ಬಾಂಬೆಯ ಅಂಬೇಡ್ಕರ್ ಮತ್ತು ಫುಲೆ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ.ರಮೇಶ್ ಕಾಂಬ್ಳೆ ಉದ್ಘಾಟಿಸಿದರು.

# ವಿದ್ಯಾರ್ಥಿಗಳಿಗೆ ಆಧುನಿಕ ತಂತ್ರಜ್ಞಾನ ಅವಶ್ಯ



ಶಂಕರಘಟ್ಟದ ಕುವೆಂಪು ವಿವಿಯಲ್ಲಿ ಆಯೋಜಿಸಿದ್ದ ಕಾರ್ಯಾಗಾರವನ್ನು ಕುವೆಂಪು ವಿವಿ ಕುಲಪತಿ ಪ್ರೊ. ಜೋಗನ್ ಶಂಕರ್ ಉದ್ಘಾಟಿಸಿದರು.

**ಶಿವಮೊಗ್ಗ**

ಇಂದಿನ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಜ್ಞಾನ ಹಾಗೂ ಆಧುನಿಕ ತಂತ್ರಜ್ಞಾನದ ಅಗತ್ಯತೆ ಇದೆ ಎಂದು ಕುವೆಂಪು ವಿವಿ ಕುಲಪತಿ ಪ್ರೊ. ಜೋಗನ್ ಶಂಕರ್ ಹೇಳಿದರು.

ಕುವೆಂಪು ವಿವಿ ಪ್ರೊ. ಹಿರೇಮಠ ಸಭಾಂಗಣದಲ್ಲಿ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಗಣಕ ವಿಜ್ಞಾನ ಮತ್ತು ಎಂಸಿಎ ವಿಭಾಗದ ವತಿಯಿಂದ ಆಯೋಜಿಸಿದ್ದ 'ಅಡ್ವಾನ್ಸ್‌ಡ್ ಟೆಕ್ನಾಲಜೀಸ್ ಇನ್ ಕಂಪ್ಯೂಟರ್ ಸೈನ್ಸ್' ವಿಷಯದ ಬಗ್ಗೆ ಒಂದು ವಾರದ ರಾಷ್ಟ್ರೀಯ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಕಾರ್ಯಾಗಾರವು ವಿದ್ಯಾರ್ಥಿಗಳ ಜ್ಞಾನಾಭಿವೃದ್ಧಿಗೆ ಮುಖ್ಯವಾದದ್ದರಿಂದ, ವಿಶ್ವವಿದ್ಯಾನಿಲಯ ಈ ರೀತಿಯ ಕಾರ್ಯಾಗಾರಗಳನ್ನು ಹೆಚ್ಚು ಹೆಚ್ಚು ಪ್ರೋತ್ಸಾಹಿಸುತ್ತದೆ ಎಂದರು.

ಸಹಾಯಕ ಪ್ರಾಧ್ಯಾಪಕ ಎಂ. ರವಿಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಸಹಾಯಕ ಪ್ರಾಧ್ಯಾಪಕ ಡಾ.ಎಂ. ಸುರೇಶ್, ಕುಲಸಚಿವ ಪ್ರೊ.ಜೆ. ಸೋಮಶೇಖರ್, ಪ್ರೊ.ಸಿ.ಎಂ. ತ್ಯಾಗರಾಜ, ಪ್ರೊ.ಪಿ.ಎಸ್. ಹಿರೇಮಠ, ಜಿ.ಆರ್. ಯೋಗೀಶ್ ನಾಯಕ್, ಪ್ರೊ. ಅಶೋಕ ರಾವ್ ಇದ್ದರು. ವಿಶ್ರಾಂತ ಕುಲಪತಿ ಪ್ರೊ. ಚಿದಾನಂದ ಗೌಡ ಅವರನ್ನು ಇದೇ ವೇಳೆ ಸನ್ಮಾನಿಸಲಾಯಿತು.

# ವಿದ್ಯಾರ್ಥಿಗಳ ಜ್ಞಾನಾಭಿವೃದ್ಧಿಗೆ ವಿವಿ ಪ್ರೋತ್ಸಾಹ

**ವಿಕ ಸುದ್ದಿಲೋಕ** ಶಂಕರಘಟ್ಟ

ಇಲ್ಲಿನ ಕುವೆಂಪು ವಿವಿಯ ಪ್ರೊ.ಹಿರೇಮಠ ಸಭಾಂಗಣದಲ್ಲಿ ವಿವಿಯ ಸ್ನಾತಕೋತ್ತರ ಗಣಕ ವಿಜ್ಞಾನ ಮತ್ತು ಎಂಸಿಎ ವಿಭಾಗದ ವತಿಯಿಂದ 'Advanced Technologies in Computer Science' ವಿಷಯ ಕುರಿತು ಒಂದು ವಾರದ ರಾಷ್ಟ್ರೀಯ ಕಾರ್ಯಾಗಾರವನ್ನು ಇತ್ತೀಚೆಗೆ ಏರ್ಪಡಿಸಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಕುಲಪತಿ ಪ್ರೊ.ಜೋಗನ್ ಶಂಕರ್, ಕಾರ್ಯಾಗಾರವು ವಿದ್ಯಾರ್ಥಿಗಳ ಜ್ಞಾನಾಭಿವೃದ್ಧಿಗೆ ಮುಖ್ಯವಾಗಿರುವ ಕಾರಣ ವಿವಿಯು ಇಂತಹ ಚಟುವಟಿಕೆಗೆ ಹೆಚ್ಚು ಪ್ರೋತ್ಸಾಹ ನೀಡುತ್ತದೆ ಎಂದರು.

ಕುಲಸಚಿವ ಪ್ರೊ.ಜೆ. ಸೋಮಶೇಖರ್ ಮತ್ತು ಪ್ರೊ.ಸಿ.ಎಂ.ತ್ಯಾಗರಾಜ ಮಾತನಾಡಿದರು.

ಹುಬ್ಬಳ್ಳಿಯ ಬಿವಿಬಿ ಎಂಜಿನಿಯರಿಂಗ್ ಕಾಲೇಜಿನ ಪ್ರೊ.ಪಿ.ಎಸ್ ಹಿರೇಮಠ ಹಾಗೂ ಬೆಂಗಳೂರು ಐಐಎಂನ ಪ್ರೊ.ಅಶೋಕ ರಾವ್ ಉಪಸ್ಥಿತರಿದ್ದರು. ವಿಭಾಗದ ಮುಖ್ಯಸ್ಥ ಎಂ.ರವಿಕುಮಾರ್ ಅಧ್ಯಕ್ಷತೆ ವಹಿಸಿ, ಸ್ವಾಗತಿಸಿದರು. ಸಹಾಯಕ ಪ್ರಾಧ್ಯಾಪಕ ಡಾ. ಎಂ.ಸುರೇಶ ನೇತೃತ್ವ ವಹಿಸಿದ್ದರು. ವಿದ್ಯಾರ್ಥಿನಿಯರಾದ ಪೂಜಾ, ಲಾವಣ್ಯ ಮತ್ತು ಬಿಂದು ಪ್ರಾರ್ಥಿಸಿದರು.



ಭದ್ರಾವತಿ ತಾಲೂಕಿನ ಶಂಕರಘಟ್ಟದ ಕುವೆಂಪು ವಿವಿಯಲ್ಲಿ Advanced Technologies in Computer Science' ವಿಷಯ ಕುರಿತು ಇತ್ತೀಚೆಗೆ ಏರ್ಪಡಿಸಿದ್ದ ಒಂದು ವಾರದ ರಾಷ್ಟ್ರೀಯ ಕಾರ್ಯಾಗಾರವನ್ನು ಕುಲಪತಿ ಪ್ರೊ.ಜೋಗನ್ ಶಂಕರ್ ಉದ್ಘಾಟಿಸಿದರು.

ವಿಭಾಗದ ಸಹಾಯಕ ಪ್ರಾಧ್ಯಾಪಕ ಜಿ.ಆರ್. ಯೋಗೀಶ್ ನಾಯಕ್ ವಂದಿಸಿದರು. ಅತಿಥಿ ಉಪನ್ಯಾಸಕರಾದ ದಿವ್ಯರಾಣಿ ಹಾಗೂ ನಾಗಶ್ರೀ ನಿರೂಪಿಸಿದರು. ಕಾರ್ಯಾಗಾರದ ಎರಡನೇ ದಿನದಂದು ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ವಿಶ್ರಾಂತ ಕುಲಪತಿ ಪ್ರೊ.ಚಿದಾನಂದ ಗೌಡರನ್ನು ಸನ್ಮಾನಿಸಲಾಯಿತು.

Vijaya Karnataka, Page- II (Supp. Page)

# ಆರೋಪ ನಿರಾಕರಣೆ

**ಶಿವಮೊಗ್ಗ:** ಕುವೆಂಪು ವಿಶ್ವವಿದ್ಯಾಲಯದಲ್ಲಿ ನ್ಯಾಯಕ್ಕಾಗಿ ಜಂಟಿ ಹೋರಾಟ ಸಮಿತಿಯಿಂದ ವಿದ್ಯಾರ್ಥಿ ರೋಹಿತ್ ವೇಮುಲು ಆತ್ಮಹತ್ಯೆ ಖಂಡಿಸಿ ಇತ್ತೀಚೆಗೆ ನಡೆದ ಪ್ರತಿಭಟನೆ ಕುರಿತು ಕೆಲ ಸಂಘ, ಸಂಸ್ಥೆಗಳು ಮಾಡಿರುವ ಆರೋಪವನ್ನು ಕುವೆಂಪು ವಿವಿ ಸ್ನಾತಕೋತ್ತರ ಶಿಕ್ಷಕರ ಸಂಘ ನಿರಾಕರಿಸಿದೆ.

ವಿದ್ಯಾರ್ಥಿ ರೋಹಿತ್ ವೇಮುಲ ಪರ ಕುವೆಂಪು ವಿವಿಯ ಕೆಲವೊಂದು ವಿದ್ಯಾರ್ಥಿಗಳು ಬೆಂಬಲ ವ್ಯಕ್ತಪಡಿಸಿ ತರಗತಿಗಳನ್ನು ಬಹಿಷ್ಕರಿಸಿ, ಅಪರಾಧಿಗಳನ್ನು ಗುರುತಿಸಿ ಶಿಕ್ಷಿಸಬೇಕು ಎಂದು ಕುವೆಂಪು ಪ್ರತಿಮೆಯ ಬಳಿ ಧರಣಿ ಮಾಡಿರುತ್ತಾರೆ. ಧರಣಿಕಾರರನ್ನು ಕುರಿತು ವಿವಿಯ ಕೆಲವೊಂದು ಅಧ್ಯಾಪಕರು ಮಾತನಾಡಿದ್ದಾರೆ. ಆದರೆ ಇದನ್ನು ತಪ್ಪಾಗಿ ಗ್ರಹಿಸಿ ಶಿವಮೊಗ್ಗ ಜಿಲ್ಲೆಯ ಕೆಲವೊಂದು ಸಂಘ ಸಂಸ್ಥೆಗಳ ಕಾರ್ಯಕರ್ತರು ಕುವೆಂಪು ವಿವಿಯ ಅಧ್ಯಾಪಕರು ದೇಶದ್ರೋಹದ ವಿಷಬೀಜವನ್ನು ಬಿತ್ತುತ್ತಿದ್ದಾರೆ. ಆದ್ದರಿಂದ ಪ್ರತಿಭಟನೆ ನಡೆಸಿ ದೇಶದ್ರೋಹಿ ಚಟುವಟಿಕೆಗಳಲ್ಲಿ ಭಾಗವಹಿಸಿರುವ ಅಧ್ಯಾಪಕರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಬೇಕು ಎಂದು ಸಂಬಂಧಪಟ್ಟ ಇಲಾಖೆ ಮತ್ತು ಅಧಿಕಾರಿಗಳನ್ನು ಆಗ್ರಹಿಸಿರುತ್ತಾರೆ.

ಈ ಸಂಘ, ಸಂಸ್ಥೆಗಳು ಆರೋಪಿಸಿದಂತೆ ಕುವೆಂಪು ವಿವಿಯ ಅಧ್ಯಾಪಕರು ಹಾಗೂ ಆಡಳಿತ ವರ್ಗ ಯಾವುದೇ ದೇಶದ್ರೋಹದ ಚಟುವಟಿಕೆಯಲ್ಲಿ ತೊಡಗಿಕೊಂಡಿರುವುದಿಲ್ಲ, ಅಲ್ಲದೆ ವಿದ್ಯಾರ್ಥಿಗಳಿಗೆ ಯಾವುದೇ ರೀತಿಯಲ್ಲಿ ಪ್ರಚೋದಿಸುವುದು, ತಾರತಮ್ಯ ಮಾಡುವುದು ಹಾಗೂ ಬೇಧಭಾವವನ್ನುಂಟು ಮಾಡುವುದು ನಡೆದಿಲ್ಲ, ಆದ್ದರಿಂದ ಪ್ರಾಧ್ಯಾಪಕರ ವಿರುದ್ಧ ಕೆಲವು ಸಂಘ, ಸಂಸ್ಥೆಗಳು ಮಾಡಿರುವ ಆರೋಪ ಸತ್ಯಕ್ಕೆ ದೂರ ಎಂದು ಸಂಘದ ಪ್ರಕಟಣೆ ತಿಳಿಸಿದೆ.

Vijaya Karnataka, Page- II (Supp. Page)

**ಕುವೆಂಪು ವಿಶ್ವವಿದ್ಯಾನಿಲಯ:**

**ರಾಜ್ಯಶಾಸ್ತ್ರ ಅಧ್ಯಯನ ವಿಭಾಗ :** ಡಿ.ದೇವರಾಜ್ ಅರಸ್ ಕುರಿತು ವಿಶೇಷ ಕಾರ್ಯಕ್ರಮ, ಉದ್ಘಾಟನೆ-ಶಿಕ್ಷಣ ಸಚಿವ ಕಿಮ್ಮನೆ ರತ್ನಾಕರ್, ಅಧ್ಯಕ್ಷತೆ-ಕುಲಪತಿ ಪ್ರೊ.ಜೋಗನ್ ಶಂಕರ್, ಸ್ಥಳ-ಪ್ರೊ.ಎಸ್.ಪಿ.ಹಿರೇಮಠ ಸಭಾಂಗಣ, ಜ್ಞಾನಸಹ್ಯಾದ್ರಿ ಶಂಕರಘಟ್ಟ, ಸಮಯ-ಬೆಳಗ್ಗೆ 10.

# ಅರ್ಹ ಸಂಶೋಧನಾ ವಿದ್ಯಾರ್ಥಿಗೆ ಅವಕಾಶ

**ಶಿವಮೊಗ್ಗ:** ಯುಜಿಸಿ ಪ್ರಾಯೋಜಿತ ಹಿರಿಯ ಸಂಶೋಧನಾ ಪ್ರಾಜೆಕ್ಟ್ 'ಡಿಜಿಟಲ್ ಇಮೇಜ್ ಅನಾಲಿಸಿಸ್ ಆ್ಯಂಡ್ ಡೀನಾಯ್ಸಿಂಗ್ ಯುಸಿಂಗ್ ಟೈಮ್ ಫ್ರೀಕ್ವೆನ್ಸಿ ಟೆಕ್ನಿಕ್ಸ್ ಕುರಿತು ಸಂಶೋಧನಾ ಕಾರ್ಯ ಕೈಗೊಳ್ಳಲು ಅರ್ಹ ವಿದ್ಯಾರ್ಥಿಗಳಿಂದ ಒಂದು ಕಿರಿಯ ಸಂಶೋಧನಾ ವಿದ್ಯಾರ್ಥಿ ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿದೆ. ಸ್ನಾತಕೋತ್ತರ ಎಲೆಕ್ಟ್ರಾನಿಕ್ಸ್ ಪದವಿಯಲ್ಲಿ ಕನಿಷ್ಠ ಶೇ.55 ಅಂಕ ಗಳಿಸಿರುವವರು ಅರ್ಜಿ ಸಲ್ಲಿಸಬಹುದು. ಸಂಶೋಧನಾ ಅವಧಿ ಎರಡೂವರೆ ವರ್ಷದ್ದಾಗಿರುತ್ತದೆ. ಅರ್ಜಿಯನ್ನು ಸ್ವವಿವರದೊಂದಿಗೆ ಮಾ.12ರೊಳಗೆ ತಲುಪುವಂತೆ 'ಡಾ. ಬಿ.ಎನ್.ಜಗದಾಳೆ, ಸಹಾಯಕ ಪ್ರಾಧ್ಯಾಪಕರು/ಪ್ರಧಾನ ಸಂಶೋಧಕರು, ಎಲೆಕ್ಟ್ರಾನಿಕ್ಸ್ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ (Email: basujagadale@gmail.com, Office - 08282 256199 ) ಇವರಿಗೆ ಕಳಿಸಬೇಕು ಎಂದು ವಿಭಾಗದ ಪ್ರಾಧ್ಯಪಕರು ತಿಳಿಸಿದ್ದಾರೆ.

# 'Make Ambedkar's Study Available to Students'

**Shivamogga:** Mumbai-based Ambedkar and Pule Study Centre director Ramesh Kamble the movements of the oppressed classes, which have been forgotten, should be made readily avaibale to the people.

Inaugurating a workshop for the directors of Ambedkar Study Centres of all universities of the state at the Kuvempu University at Shankarghatta on Tuesday, he said that Ambedkar study centres should take the lead in this direction. "We have been studying sociologists and their theories developed after 1932. But in 1916, Ambedkar had analysed the inter-relationship between casteism and gender inequality. But we are not giving much importance to this. No one is asking as to why such analysis is not available for the students who study in colleges and universities," he said.

Presiding over the programme, university Vice-Chancellor Jogan Shankar said that the writings of Dr Ambedkar will help every individual understand the social structure of India. In fact, various discussions and works are being taken up in universities. In future, the Kuvempu University will take up various programmes to ensure social and intellectual development to mark the 125th birthday of Ambedkar, he added. **ENS**